5] The above is an extract of the detailed format of Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The detailed format of consolidated and standalone results of the Company are available on the Company's website www.tatatechnologies.com/in, and also on the website of the BSE Limited, www.bseindia.com and National Stock Exchange of India Limited, www.nseindia.com, where the shares of the Company are listed.

Scan QR to review the results online

For and on behalf of the Board of Directors
TATA TECHNOLOGIES LIMITED

Warren Harris
Chief Executive Officer and Managing Director
DIN: 02098548

Date: July 17, 2026
Place: Mumbai

Adfactors 180/26

ATHER

ಎಥರ್ ಎನರ್ಜಿ ಲಿಮಿಟೆಡ್

(ಈ ಹಿಂದೆ ಎಥರ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಕಾರ್ಪೊರೇಟ್ ಗುರುತಿನ ಸಂಖ್ಯೆ (CIN): L40100KA2013PLC093769
ನೊಂದಾಯಿತ ಕಚೇರಿ: 3ನೇ ಮಹಡಿ, ಟವರ್ ಡಿ, ಐಬಿಸಿ ನಾಲೆಡ್ಜ್ ಪಾರ್ಕ್, #4/1, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು - 560 029, ಕರ್ನಾಟಕ, ಭಾರತ
ವೆಬ್‌ಸೈಟ್: www.atherenergy.com, **ಇಮೇಲ್:** cs@atherenergy.com
ಫೋನ್: +91 80 6646 5750

ವಿಡಿಯೋ ಕಾನ್ಫರೆನ್ಸಿಂಗ್ ಅಥವಾ ಇತರ ಆಡಿಯೋ-ವಿಶುವಲ್ ಮಾಧ್ಯಮಗಳ ಮೂಲಕ ನಡೆಯಲಿರುವ ಎಥರ್ ಎನರ್ಜಿ ಲಿಮಿಟೆಡ್‌ನ ವಿಶೇಷ ಸಾಮಾನ್ಯ ಸಭೆಯ (EGM) ಪ್ರಕಟಣೆ

ಕಂಪನಿ ಕಾಯ್ದೆ, 2013 ರ ಅನ್ವಯವಾಗುವ ನಿಬಂಧನೆಗಳು, ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್ಕ್ಲೋಷರ್ ರಿಕ್ವೈರ್ಮೆಂಟ್ಸ್) ರೆಗ್ಯುಲೇಶನ್ಸ್ , 2015 (ಸೆಬಿ ಲಿಸ್ಟಿಂಗ್ ರೆಗ್ಯುಲೇಶನ್ಸ್), ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (''MCA'') ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 8, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020 ದಿನಾಂಕ ಮೇ 05, 2020 ಮತ್ತು ಈ ಸಂಬಂಧ ಹೊರಡಿಸಲಾದ ತದನಂತರದ ಸುತ್ತೋಲೆಗಳು, ಹಾಗೂ ಇತ್ತೀಚಿನ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ದಿನಾಂಕ ಸೆಪ್ಟೆಂಬರ್ 22, 2025 ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಹೊರಡಿಸಿರುವ ಸುತ್ತೋಲೆಗಳಿಗೆ (ಇನ್ನು ಮುಂದೆ ಜಂಟಿಯಾಗಿ ''ಸುತ್ತೋಲೆಗಳು'' ಎಂದು ಕರೆಯಲಾಗುತ್ತದೆ) ಅನುಗುಣವಾಗಿ, ಎಥರ್ ಎನರ್ಜಿ ಲಿಮಿಟೆಡ್ (**'ಕಂಪನಿ'**) ನ ಸದಸ್ಯರು/ಷೇರುದಾರರು ಈ ಕೆಳಗಿನ ವಿಷಯವನ್ನು ಗಮನಿಸಬೇಕಾಗಿ ವಿನಂತಿ.

ಕಂಪನಿಯ ವಿಶೇಷ ಸಾಮಾನ್ಯ ಸಭೆಯು (''EGM''/''ಇಜಿಎಂ'') **ಶುಕ್ರವಾರ, ಆಗಸ್ಟ್ 14, 2026** ರಂದು **11:30 ಗಂಟೆಗೆ (IST)** ವಿಡಿಯೋ ಕಾನ್ಫರೆನ್ಸಿಂಗ್ (''VC'') ಅಥವಾ ಇತರ ಆಡಿಯೋ-ವಿಶುವಲ್ ಮಾಧ್ಯಮಗಳ (''OAVM'') ಮೂಲಕ ಇಜಿಎಂ ನೋಟಿಸ್‌ನಲ್ಲಿ ಉಲ್ಲೇಖಿಸಲಾಗುವ ವ್ಯವಹಾರಗಳನ್ನು ನಿರ್ವಹಿಸಲು ನಡೆಯಲಿದೆ.

ಮೇಲೆ ತಿಳಿಸಲಾದ ಸುತ್ತೋಲೆಗಳಿಗೆ ಅನುಗುಣವಾಗಿ, ಇಜಿಎಂ ನೋಟಿಸ್ ಅನ್ನು ಕಂಪನಿ/ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್ (RTA)/ಡಿಪಾಸಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರುಗಳಿಗೆ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ (ಇಮೇಲ್ ಮೂಲಕ) ಕಳುಹಿಸಲಾಗುತ್ತದೆ.

ಸದಸ್ಯರು ಇಜಿಎಂ ನೋಟಿಸ್ ಅನ್ನು ಕಂಪನಿಯ ವೆಬ್‌ಸೈಟ್ https://www.atherenergy.com/investor-relations/governance ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ www.nseindia.com ಮತ್ತು www.bseindia.com ನಲ್ಲಿ ಹಾಗೂ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (''NSDL'') ನ ವೆಬ್‌ಸೈಟ್ www.evoting.nsdl.com ನಲ್ಲೂ ಪಡೆದುಕೊಳ್ಳಬಹುದು.

ಸದಸ್ಯರು ಕೇವಲ VC/OAVM ಸೌಲಭ್ಯದ ಮೂಲಕವೇ ಇಜಿಎಂನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. VC/OAVM ಸೌಲಭ್ಯದ ಮೂಲಕ ಭಾಗವಹಿಸುವ ಸದಸ್ಯರನ್ನು ಕಂಪನಿ ಕಾಯ್ದೆ, 2013 ರ ಸೆಕ್ಷನ್ 103 ರ ಅಡಿಯಲ್ಲಿ ಕೋರಂ (Quorum) ಉದ್ದೇಶಕ್ಕಾಗಿ ಪರಿಗಣಿಸಲಾಗುವುದು. ಸದಸ್ಯರು NSDL ನ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಇಜಿಎಂ ನೋಟಿಸ್‌ನಲ್ಲಿ ತಿಳಿಸಲಾದ ವ್ಯವಹಾರಗಳ ಮೇಲೆ ರಿಮೋಟ್ ಇ-ವೋಟಿಂಗ್ (ದೂರಸ್ಥ ಇ-ಮತದಾನ) ಮಾಡಲು ಅವಕಾಶವಿರುತ್ತದೆ. ಇಜಿಎಂಗೆ ಸೇರುವ ವಿಧಾನ ಮತ್ತು ರಿಮೋಟ್ ಇ-ವೋಟಿಂಗ್ ಅಥವಾ ಇಜಿಎಂ ಸಮಯದಲ್ಲಿ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮತ ಚಲಾಯಿಸುವ ವಿವರವಾದ ಸೂಚನೆಗಳನ್ನು ಇಜಿಎಂ ನೋಟಿಸ್‌ನಲ್ಲಿ ನೀಡಲಾಗುವುದು.

ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ/ನವೀಕರಿಸದ ಸದಸ್ಯರು, ಎಲೆಕ್ಟ್ರಾನಿಕ್ ರೂಪದಲ್ಲಿ ನೋಟಿಸ್ ಪಡೆಯಲು ಮತ್ತು ರಿಮೋಟ್ ಇ-ವೋಟಿಂಗ್ ಅಥವಾ ಇಜಿಎಂ ಸಮಯದಲ್ಲಿ ಮತ ಚಲಾಯಿಸಲು ಯೂಸರ್ ಐಡಿ (User ID) ಮತ್ತು ಪಾಸ್‌ವರ್ಡ್ ಪಡೆಯಲು, ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ (DP) ಸೂಚಿಸಿದ ಪ್ರಕ್ರಿಯೆಯ ಪ್ರಕಾರ ಆಯಾ ಡಿಪಾಸಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ.

ಈ ಪ್ರಕಟಣೆ ಅನ್ನು ಕಂಪನಿಯ ಎಲ್ಲಾ ಸದಸ್ಯರ ಮಾಹಿತಿ ಮತ್ತು ಅನುಕೂಲಕ್ಕಾಗಿ ಹಾಗೂ MCA ಮತ್ತು ಸೆಬಿ ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆಗಳ ಅನುಸರಣೆಯಾಗಿ ನೀಡಲಾಗುತ್ತಿದೆ.

ಎಥರ್ ಎನರ್ಜಿ ಲಿಮಿಟೆಡ್ ಪರವಾಗಿ
ಸಹಿ/-
ಪೂಜಾ ಅಗರ್ವಾಲ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ಸದಸ್ಯತ್ವ ಸಂಖ್ಯೆ: A49310

ದಿನಾಂಕ: ಜುಲೈ 17, 2026
ಸ್ಥಳ: ಬೆಂಗಳೂರು

indegene®

ಇಂಡಿಜೀನ್ ಲಿಮಿಟೆಡ್

ನೊಂದಾಯಿತ ಕಚೇರಿ: ಆಸ್ಪೆನ್ ಜಿ4, 3ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್ ಔಟರ್ ರಿಂಗ್ ರೋಡ್, ನಾಗವಾರ, ಬೆಂಗಳೂರು – 560045
(CIN): L73100KA1998PLC102040;
ದೂರವಾಣಿ: +91 80 4674 4567/ +91 80 4644 7777;
ಇಮೇಲ್: compliance.officer@indegene.com; ವೆಬ್‌ಸೈಟ್: www.indegene.com

ನೋಟಿಸ್

ಇಂಡಿಜೀನ್ ಲಿಮಿಟೆಡ್ ("ಕಂಪನಿ") ಸದಸ್ಯರ 28ನೇ ವಾರ್ಷಿಕ ಮಹಾಸಭೆಯು (AGM) ಗುರುವಾರ, 13 ಆಗಸ್ಟ್ 2026 ರಂದು ಭಾರತೀಯ ಪ್ರಮಾಣಿತ ಸಮಯ (IST) ಸಂಜೆ 16:30 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ ("VC") ಮತ್ತು ಇತರ ದೃಶ್ಯ-ಶ್ರವಣ ಮಾಧ್ಯಮಗಳ ("OAVM") ಮೂಲಕ ಜರುಗಲಿದೆ ಎಂದು ಇದರ ಮೂಲಕ ಸೂಚನೆ ನೀಡಲಾಗಿದೆ. ಈ ಸಭೆಯು ಕಂಪನಿಗಳ ಕಾಯ್ದೆ, 2013 ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳ ("ಕಾಯ್ದೆ") ನಿಬಂಧನೆಗಳ ಪ್ರಕಾರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಇತರ ಸುತ್ತೋಲೆಗಳೊಂದಿಗೆ ("MCA ಸುತ್ತೋಲೆಗಳು") ಓದಿಕೊಳ್ಳಲಾದ, 22 ಸೆಪ್ಟೆಂಬರ್, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ರ ಅನುಸರಣೆಗೆ ಹಾಗೂ ಸೆಕ್ಯೂರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್ಕ್ಲೋಸರ್ ರಿಕ್ವೈರ್ಮೆಂಟ್ಸ್) ರೆಗ್ಯುಲೇಷನ್ಸ್, 2015 ರ ("ಲಿಸ್ಟಿಂಗ್ ರೆಗ್ಯುಲೇಷನ್ಸ್") ಅನುಸಾರವಾಗಿ, ವಾರ್ಷಿಕ ಮಹಾಸಭೆಯನ್ನು ಕರೆಯುವ ಸೂಚನಾ ಪತ್ರದಲ್ಲಿ ಸೂಚಿಸಲಾದ ವ್ಯವಹಾರಗಳನ್ನು ನಿರ್ವಹಿಸಲು ನಡೆಯಲಿದೆ.

ಮೇಲೆ ತಿಳಿಸಲಾದ ಸುತ್ತೋಲೆಗಳ ಅನುಸರಣೆಯಾಗಿ, 28ನೇ ವಾರ್ಷಿಕ ಮಹಾಸಭೆಯ (AGM) ಸೂಚನೆ, ಹಣಕಾಸು ವರದಿಗಳು ಮತ್ತು ಇ-ವೋಟಿಂಗ್ (ಎಲೆಕ್ಟ್ರಾನಿಕ್ ಮತದಾನ) ಸೂಚನೆಗಳನ್ನು ಒಳಗೊಂಡಿರುವ 2025-26 ರ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ಶುಕ್ರವಾರ, 17 ಜುಲೈ, 2026 ರಂದು ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟ್ ("RTA") ಅಥವಾ ಆಯಾ ಡಿಪಾಸಿಟರಿ ಪಾರ್ಟಿಸಿಪೆಂಟ್ಗಳ ("DPs") ಬಳಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಮಾತ್ರ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಕಳುಹಿಸಲಾಗಿದೆ. ವಾರ್ಷಿಕ ವರದಿ ಮತ್ತು ಸಭೆಯ ಸೂಚನಾ ಪತ್ರವು ಕಂಪನಿಯ ವೆಬ್‌ಸೈಟ್ https://www.indegene.com/, ಷೇರು ಮಾರುಕಟ್ಟೆಗಳ ವೆಬ್‌ಸೈಟ್‌ಗಳಾದ BSE ಮತ್ತು NSE ನ ಕ್ರಮವಾಗಿ www.bseindia.com ಮತ್ತು www.nseindia.com, ಹಾಗೂ ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ ("NSDL") ನ ವೆಬ್‌ಸೈಟ್ www.evoting.nsdl.com ನಲ್ಲೂ ಲಭ್ಯವಿರುತ್ತದೆ ಎಂಬುದನ್ನು ಸದಸ್ಯರು ಗಮನಿಸಬಹುದಾಗಿದೆ. ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟ್ಗಳ ಬಳಿ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ/ನವೀಕರಿಸದ ಷೇರುದಾರರಿಗೆ, 2025-26 ರ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ವೀಕ್ಷಿಸಲು ವೆಬ್ಲಿಂಕ್ ಒದಗಿಸುವ ಪತ್ರವನ್ನು ಕಳುಹಿಸಲಾಗುವುದು.

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 108, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ರೊಂದಿಗೆ ಓದಿಕೊಳ್ಳಲಾದ ಹಾಗೂ ಲಿಸ್ಟಿಂಗ್ ರೆಗ್ಯುಲೇಷನ್ಸ್ನ ರೆಗ್ಯುಲೇಷನ್ 44 ಕ್ಕೆ ಅನುಗುಣವಾಗಿ, ಕಂಪನಿಯು ತನ್ನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ (AGM) ಸೂಚನಾ ಪತ್ರದಲ್ಲಿ ಪ್ರಸ್ತಾಪಿಸಲಾದ ನಿರ್ಣಯಗಳ ಮೇಲೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮತ ಚಲಾಯಿಸಲು ಸೌಲಭ್ಯವನ್ನು ಒದಗಿಸಲು ಸಂತೋಷಪಡುತ್ತದೆ. ಇದು NSDL ಮೂಲಕ ಒದಗಿಸಲಾಗುವ ರಿಮೋಟ್ ಇ-ವೋಟಿಂಗ್ (ಸಭೆಗೆ ಮುಂಚಿತವಾಗಿ ಮತದಾನ) ಮತ್ತು ವಾರ್ಷಿಕ ಮಹಾಸಭೆಯ ಅವಧಿಯಲ್ಲಿನ ಇ-ವೋಟಿಂಗ್ ಎರಡನ್ನೂ ಒಳಗೊಂಡಿರುತ್ತದೆ.

ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಮತ ಚಲಾಯಿಸಲು ಸದಸ್ಯರ ಅರ್ಹತೆಯನ್ನು ನಿರ್ಧರಿಸಲು ಕಂಪನಿಯ ನಿರ್ದೇಶಕರ ಮಂಡಳಿಯು ಶುಕ್ರವಾರ, 07 ಆಗಸ್ಟ್ 2026 ಅನ್ನು 'ಕಟ್-ಆಫ್' ದಿನಾಂಕವೆಂದು ನಿಗದಿಪಡಿಸಿದೆ. ಕಟ್-ಆಫ್ ದಿನಾಂಕದಂದು ಸದಸ್ಯರ ನೋಂದಣಿ ಪುಸ್ತಕದಲ್ಲಿ ಅಥವಾ ಡಿಪಾಸಿಟರಿಗಳು ನಿರ್ವಹಿಸುವ ಫಲಾನುಭವಿ ಮಾಲೀಕರ ನೋಂದಣಿ ಪುಸ್ತಕದಲ್ಲಿ ಹೆಸರುಗಳನ್ನು ಹೊಂದಿರುವ ಸದಸ್ಯರು ಮಾತ್ರ ವಾರ್ಷಿಕ ಮಹಾಸಭೆಯ ಸೂಚನಾ ಪತ್ರದಲ್ಲಿ ತಿಳಿಸಲಾದ ನಿರ್ಣಯಗಳ ಮೇಲೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ಕಂಪನಿಗಳ ಕಾಯ್ದೆ, 2013 ರ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳ ಪ್ರಕಾರ ಅಗತ್ಯವಿರುವ ವಿವರಗಳು ಈ ಕೆಳಗಿನಂತಿವೆ:

a) ಸೂಚನಾ ಪತ್ರವನ್ನು ಕಳುಹಿಸಲು ಪ್ರಾರಂಭ ದಿನಾಂಕ: ಶುಕ್ರವಾರ, 17 ಜುಲೈ, 2026
b) ರಿಮೋಟ್ ಇ-ವೋಟಿಂಗ್ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ: ಸೋಮವಾರ, 10 ಆಗಸ್ಟ್, 2026 ರಂದು ಬೆಳಗ್ಗೆ 9:00 ಗಂಟೆಗೆ (IST)
c) ರಿಮೋಟ್ ಇ-ವೋಟಿಂಗ್ ಮುಕ್ತಾಯವಾಗುವ ದಿನಾಂಕ ಮತ್ತು ಸಮಯ: ಬುಧವಾರ, 12 ಆಗಸ್ಟ್, 2026 ರಂದು ಸಂಜೆ 5:00 ಗಂಟೆಗೆ (IST) (ರಿಮೋಟ್ ಇ-ವೋಟಿಂಗ್ನ ಕೊನೆಯ ದಿನಾಂಕದಂದು ಸಂಜೆ 5:00 ಗಂಟೆಯ (IST) ನಂತರ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಮತ ಚಲಾಯಿಸಲು ಅವಕಾಶವಿರುವುದಿಲ್ಲ)
d) ವಾರ್ಷಿಕ ಮಹಾಸಭೆಯ (AGM) ಅವಧಿಯಲ್ಲಿ ಮತ ಚಲಾಯಿಸುವ ಸೌಲಭ್ಯವನ್ನು ಸಹ ಕಂಪನಿಯು ಕಲ್ಪಿಸಿಕೊಡಲಿದೆ. ವಾರ್ಷಿಕ ಮಹಾಸಭೆಗೆ VC/OAVM ಮೂಲಕ ಹಾಜರಾಗುವ, ಈ ಮುಂಚೆ ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ಮತ ಚಲಾಯಿಸದ ಮತ್ತು ಮತ ಚಲಾಯಿಸಲು ಕಾನೂನುಬದ್ಧವಾಗಿ ಯಾವುದೇ ನಿರ್ಬಂಧವಿಲ್ಲದ ಸದಸ್ಯರು ಮಹಾಸಭೆಯ ಅವಧಿಯಲ್ಲಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
e) ಈಗಾಗಲೇ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಿರುವ ಸದಸ್ಯರು ಸಹ VC/OAVM ಮೂಲಕ ವಾರ್ಷಿಕ ಮಹಾಸಭೆಗೆ ಹಾಜರಾಗಬಹುದು, ಆದರೆ ಅವರು ಮತ್ತೊಮ್ಮೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
f) ಎಲೆಕ್ಟ್ರಾನಿಕ್ ವೋಟಿಂಗ್ ಇವೆಂಟ್ ನಂಬರ್ (EVEN): 140279
g) ಸೂಚನಾ ಪತ್ರವನ್ನು ಕಳುಹಿಸಿದ ನಂತರ ಕಂಪನಿಯ ಷೇರುಗಳನ್ನು ಖರೀದಿಸಿ ಸದಸ್ಯರಾಗುವ ಮತ್ತು ಕಟ್-ಆಫ್ ದಿನಾಂಕದಂದು, ಅಂದರೆ ಶುಕ್ರವಾರ, 07 ಆಗಸ್ಟ್ 2026 ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು, evoting@nsdl.co.in ಗೆ ವಿನಂತಿಯನ್ನು ಕಳುಹಿಸುವ ಮೂಲಕ ಯೂಸರ್ ಐಡಿ ಮತ್ತು ಪಾಸ್ವರ್ಡ್ ಅನ್ನು ಪಡೆಯಬಹುದು. ಆದರೆ, ಅಂತಹ ವ್ಯಕ್ತಿಯು ಈಗಾಗಲೇ ರಿಮೋಟ್ ಇ-ವೋಟಿಂಗ್ಗಾಗಿ NSDL ನಲ್ಲಿ ನೋಂದಾಯಿಸಿಕೊಂಡಿದ್ದರೆ, ಅವರು ತಮ್ಮ ಹಳೆಯ ಯೂಸರ್ ಐಡಿ ಮತ್ತು ಪಾಸ್ವರ್ಡ್ ಬಳಸಿಯೇ ಮತ ಚಲಾಯಿಸಬಹುದು.
h) ವಾರ್ಷಿಕ ಮಹಾಸಭೆಯ ಸೂಚನಾ ಪತ್ರದಲ್ಲಿ ತಿಳಿಸಲಾದ ಇ-ವೋಟಿಂಗ್ ಸೂಚನೆಗಳನ್ನು ವಿವರವಾಗಿ ಓದಿಕೊಳ್ಳಲು ಸದಸ್ಯರಿಗೆ ಸೂಚಿಸಲಾಗಿದೆ. ಇ-ವೋಟಿಂಗ್ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ದೂರುಗಳಿದ್ದಲ್ಲಿ, ಸದಸ್ಯರು https://www.evoting.nsdl.com ನಲ್ಲಿ ಲಭ್ಯವಿರುವ 'ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು' (FAQ) ವೀಕ್ಷಿಸಬಹುದು. ಇ-ವೋಟಿಂಗ್ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ನೆರವಿಗಾಗಿ, ಸದಸ್ಯರು NSDL ನ ಹಿರಿಯ ವ್ಯವಸ್ಥಾಪಕರಾದ ಶ್ರೀ ಫಲ್ಗುಣಿ ಚಕ್ರವರ್ತಿ ಅವರನ್ನು evoting@nsdl.com ಮೂಲಕ ಸಂಪರ್ಕಿಸಬಹುದು ಅಥವಾ 022-4886 7000 ಸಂಖ್ಯೆಗೆ ಕರೆ ಮಾಡಬಹುದು.
I) ಇ-ವೋಟಿಂಗ್ ಪ್ರಕ್ರಿಯೆಯನ್ನು ಮುಕ್ತ ಹಾಗೂ ಪಾರದರ್ಶಕವಾಗಿ ನಡೆಸಲು ಮಂಡಳಿಯು ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ ಆಗಿರುವ ಮಧ್ವೇಶ್ ಕೆ ಅವರನ್ನು ತಪಾಸಕರನ್ನಾಗಿ ನೇಮಕ ಮಾಡಿದೆ.

ಇಂಡಿಜೀನ್ ಲಿಮಿಟೆಡ್‌ಪರವಾಗಿ
ಸಹಿ/-
ಸೃಷ್ಟಿ ರಮೇಶ್ ಕೌಶಿಕ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ

ದಿನಾಂಕ: 18 ಜುಲೈ, 2026
ಸ್ಥಳ: ಬೆಂಗಳೂರು

3.38 ಕೋಟಿ ರುಪಾಯಿ ಅಕ್ರಮ ಆರೋಪ

ಬೌರಿಂಗ್ಸ್ ಕ್ಲಬ್ ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್‌ಅಮಾನತು

ಬೆಂಗಳೂರು: ಕೇಟರಿಂಗ್ ಕಂಪನಿಯೊಂದಕ್ಕೆ ನಿಯಮಬಾಹಿ ರವಾಗಿ 3.38 ಕೋಟಿ ರು. ಪಾವತಿಸಿದ ಆರೋಪದಡಿ ಪ್ರತಿಷ್ಠಿತ ಬೌರಿಂಗ್ ಇನ್ಸ್ಟಿಟ್ಯೂಟ್‌ನ (ಬೌರಿಂಗ್ಸ್ ಕ್ಲಬ್) ಮಾಜಿ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಶ್ರೀಕಾಂತ್ ಸದಸ್ಯತ್ವವನ್ನು 6 ತಿಂಗಳ ಅವಧಿಗೆ ಅಮಾನತು ಮಾಡಲಾಗಿದೆ. ಜುಲೈ 15ರಂದು ನಡೆದ ಆಡಳಿತ ಮಂಡಳಿಯ ವಿಶೇಷ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಅಮಾನತು ಆದೇಶ ತಕ್ಷಣದಿಂದಲೇ ಜಾರಿಗೆ ಬಂದಿದೆ ಎಂದು ಇನ್ಸ್ಟಿಟ್ಯೂಟ್‌ನ ಗೌರವ ಕಾರ್ಯದರ್ಶಿ ಭರತ್ ಪೂವಯ್ಯ ತಿಳಿಸಿದ್ದಾರೆ.

ಈ ಕುರಿತ ತನಿಖೆಗಾಗಿ ಐವರು ಸದಸ್ಯರ ಶಿಸ್ತು ಸಮಿತಿ ರಚಿಸಲಾಗಿದೆ. ಶಿಸ್ತು ಸಮಿತಿಯ ವರದಿ ಆಧರಿಸಿ ಅಗತ್ಯವುಂಟಾದರೆ ಮುಂಬರುವ ದಿನಗಳಲ್ಲಿ ಹೆಚ್ಚಿನ ಕ್ರಮ ಕೈಗೊಳ್ಳುವ ಬಗ್ಗೆ ನಿರ್ಧರಿಸಲಾಗುತ್ತದೆ. ಕ್ಲಬ್ ವ್ಯವಹಾರಗಳ ಜವಾಬ್ದಾರಿ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮೆಸರ್ಸ್ ಶುಭಂ ಕೇಟರರ್ಸ್‌ಗೆ 3.38 ಕೋಟಿ ರು. ಹಣ ಅನಧಿಕೃತವಾಗಿ ನೀಡಿರುವ ಬಗ್ಗೆ ವಿವರಣೆ ಕೋರಿ ಶ್ರೀಕಾಂತ್ ಅವರಿಗೆ ಶೋಕಾಸ್ ನೋಟಿಸ್ ನೀಡಲಾಗಿತ್ತು. ಅದಕ್ಕೆ ನೀಡಿರುವ ವಿವರಣೆ ಸಮರ್ಥನೀಯವಾಗಿಲ್ಲ. 3.38 ಕೋಟಿ ರು. ಮುಂಗಡ ಪಾವತಿಯು ಕ್ಲಬ್‌ನ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ವಿಶೇಷ ಸಭೆ ಅಭಿಪ್ರಾಯಪಟ್ಟಿದೆ.

ಸಾರ್ವಜನಿಕ ಪ್ರಕಟಣೆ

The New India Assurance Co Ltd

ಬಳಸಿದ ಸಿಬ್ಬಂದಿ ಕಾರು ಮಾರಾಟಕ್ಕಿದೆ

ಕಂಪನಿಯು ಬಳಸಿದ ಸ್ಟಾಫ್ ಕಾರ್ ಹುಂಡೈ ವೆರ್ನಾವನ್ನು "ಇರುವಂತೆಯೇ" ಆಧಾರದ ಮೇಲೆ ಖರೀದಿಸಲು ಆಸಕ್ತ ಪಕ್ಷ/ ಪಕ್ಷಗಳಿಂದ ಸೀಲ್ಡ್ ಆಫರ್‌ಗಳನ್ನು ಆಹ್ವಾನಿಸಲಾಗಿದೆ. ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ ಲಾಗಿನ್ ಮಾಡಿ ಮತ್ತು ಟೆಂಡರ್ ಸೂಚನೆ ವಿಭಾಗಕ್ಕೆ ನ್ಯಾವಿಗೇಟ್ ಮಾಡಿ. https://www.newindia.co.in/tender-notice ಆಫರ್(ಗಳನ್ನು) ಸಲ್ಲಿಸಲು ಟೆಂಡರ್ ದಾಖಲೆಯನ್ನು ಮೇಲಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು / ಮೇಲಿನ ವೆಬ್‌ಸೈಟ್‌ನಿಂದ ಪ್ರಿಂಟ್ ತೆಗೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 27-07-2026 ಸಂಜೆ 17.00 ಗಂಟೆಯವರೆಗೆ. ವಾಹನದ ತಪಾಸಣೆ/ ಪ್ರದರ್ಶನದ ಸ್ಥಳದ ವಿವರ :- ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿಮಿಟೆಡ್, ಕಾರ್ಪೊರೇಟ್ ಬಿಸಿನೆಸ್ ಆಫೀಸ್, ಬೇಸ್‌ಮೆಂಟ್ ಫ್ಲೋರ್, ಪ್ರೆಸ್ಟೀಜ್ ಸಿಗ್ಮಾ, ವಿಟ್ಟಲ್ ಮಲಯ ರಸ್ತೆ, ಬೆಂಗಳೂರು – 560 001. ಮತ್ತು ಬಿಡ್‌ಗಳನ್ನು ಈ ಕೆಳಗಿನ ವಿಳಾಸದಲ್ಲಿ ಸಲ್ಲಿಸಬೇಕಾಗಿ ವಿನಂತಿ : ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿಮಿಟೆಡ್. ಎಸ್ಟೇಟ್ ಮತ್ತು ಸ್ಥಾಪನೆ ಇಲಾಖೆ, ನೆಲ ಮಹಡಿ, ಪ್ರೆಸ್ಟೀಜ್ ಸಿಗ್ಮಾ, ವಿಟ್ಟಲ್ ಮಲಯ ರಸ್ತೆ, ಬೆಂಗಳೂರು – 560001. IRDAI ನೋಂದಣಿ ಸಂಖ್ಯೆ 190 CIN No. U99999MH1919GOI000526

IN THE COURT OF THE III ADDL DISTRICT AND SESSIONS JUDGE AT MADIKERI

RA 54 of 2024

Appellant: Smt Kala and others
Vs
Respondents: Smt Lalitha and others

COURT NOTICE TO RESPONDENT NUMBER 8

Smt POORNIMA, 46 years, D/o Sri Niruvani Gowda and Smt Gowramma #17, 4th cross, Gowkehala Lakshmi, Narasimhayya layout, Mayura hostel, Bagalagunte, Bangalore district - 560 073

The appellants have filed this appeal challenging the judgement and decree dated 29.07.2024 passed by the learned senior civil judge, Somwarpet in O S 59 of 2018.

Take notice that you are required to appear on **11/08/2026** at 11.00 a.m. before this court either personally or through an advocate, failing which the appeal will be proceeded and determined in accordance with law in your absence.

G R Ravishankar
B.Com., LLB
Advocate for appellant

By order of the court
Sheristedar
Chief Administrative Officer
District and Sessions Judge of Kodagu
Madikeri

Madikeri
02.07.2026

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪೆನಿ (ಇಂಡಿಯಾ)ಲಿಮಿಟೆಡ್ ಎಆರ್‌ಸಿಐಎಲ್ -ಸಿಪಿಎಸ್-IV, ಟ್ರಸ್ಟ್ (''ಎಆರ್‌ಸಿಐಎಲ್'') ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 (2002 ರ 54) (''ಹೇಳಿದ ಕಾಯಿದೆ'') ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 (''ಹೇಳಿದ ನಿಯಮಗಳು'') ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **22.01.2026** ರಂದು ಕರೆದು ಸಾಲಗಾರ **ಕೆ ಡಿ ಸಿದ್ದೇಶ್ ಅಲಿಯಾಸ್ ಸಿದ್ದೇಶ್ ಕೆ ಡಿ ಮಾಲೀಕರು ಗಂಗೋತ್ರಿ ಫ್ಯಾಮಿಲಿ ರೆಸ್ಟೊರೆಂಟ್ ಮತ್ತು ಅನಿತಾ ಎಸ್ ಅಲಿಯಾಸ್ ಎಸ್ ಅನಿತಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **22.01.2026** ರ ವರೆಗೆ **ರೂ. 60,85,122.2 (ಅರವತ್ತು ಲಕ್ಷದ ಎಂಬತ್ತೈದು ಸಾವಿರದ ಒಂದನೂರ ಇಪ್ಪತ್ತೆರಡು ರೂಪಾಯಿಗಳು ಮತ್ತು ಎರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HLLAMYS00468133** ಸದರಿ ನೋಟೀಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **23.01.2026** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಸಾಲಗಾರ/ಜಾಮೀನುದಾರರು/ಅಡಮಾನದಾರರು **ಎಆರ್‌ಸಿಐಎಲ್** ಹೇಳಲಾದ ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿರುವ **ಎಆರ್‌ಸಿಐಎಲ್** ಅಧಿಕೃತ ಅಧಿಕಾರಿಯು ದಿನಾಂಕ **15.07.2026** ರಂದು ಹೇಳಲಾದ ನಿಯಮಗಳ ನಿಯಮ 8 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 13ರ ಸಬ್-ಸೆಕ್ಷನ್ (4) ರ ಅಡಿಯಲ್ಲಿ ಅವನಿಗೆ/ಅವಳಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಸುರಕ್ಷಿತ ಸ್ವತ್ತುಗಳ **ಸಾಂಕೇತಿಕ ಸ್ವಾಧೀನವನ್ನು** ತೆಗೆದುಕೊಂಡಿದ್ದಾರೆ ಎಂದು ಸಾಲಗಾರ/ಜಾಮೀನುದಾರರು/ಅಡಮಾನದಾರರು ಮತ್ತು ಸಾರ್ವಜನಿಕರಿಗೆ ಇಲ್ಲಿ ಸೂಚನೆ ನೀಡಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಎಆರ್‌ಸಿಐಎಲ್** ನ ಬಾಕಿ ಇರುವ ಮೊತ್ತ **ರೂ. 64,39,305.51 (ಅರವತ್ತನಾಲ್ಕು ಲಕ್ಷದ ಮೂವತ್ತೊಂಬತ್ತು ಸಾವಿರದ ಮುನ್ನೂರ ಐದು ರೂಪಾಯಿಗಳು ಮತ್ತು ಐವತ್ತೊಂದು ಪೈಸೆ ಮಾತ್ರ)** ಸದರಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ದಿನಾಂಕ **25.06.2026** ರಂತೆ **26.06.2026** ರಿಂದ ಒಪ್ಪಂದದ ದರದಲ್ಲಿ ಹೆಚ್ಚಿನ ಬಡ್ಡಿಯೊಂದಿಗೆ ಎಲ್ಲಾ ಪ್ರಾಸಂಗಿಕ ವೆಚ್ಚಗಳು, ಶುಲ್ಕಗಳು ಮತ್ತು ಉಂಟಾದ ವೆಚ್ಚಗಳೊಂದಿಗೆ ಪಾವತಿ / ವಸೂಲಾತಿ ವರೆಗೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆ ಎಲ್ಲಾ ತುಣುಕು ಮತ್ತು ಆಸ್ತಿಯ ಪಾರ್ಸೆಲ್ ಸಂಖ್ಯೆ. 151600602700601823, ಕಥಾ ಸಂಖ್ಯೆ. 1799, ಸೈಟ್ ಸಂಖ್ಯೆ. 727, ಎಂಐಜಿ - 1, ಪೂರ್ವದಿಂದ ಪಶ್ಚಿಮಕ್ಕೆ 8.00 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 12.00 ಮೀಟರ್ ಅಳತೆ, ಒಟ್ಟು 96.00 ಚದರ ಮೀಟರ್ಗಳನ್ನು ಒಳಗೊಂಡಿದೆ, ಆರ್ ಸಿ ಸಿ ಕಟ್ಟಡವನ್ನು ಅಳತೆ ಮಾಡುವ 104.50 ಚದರ ಮೀಟರ್‌ಗಳನ್ನು ಒಳಗೊಂಡಿದೆ, ಕೆ ಹೆಚ್ ಬಿ ಕಾಲೋನಿ, ಸತ್ಯಮಂಗಲ, ಹಾಸನ ಕಸಬಾ ಹೋಬಳಿ, ಹಾಸನ- ತಾಲ್ಲೂಕು- 573101, ಕರ್ನಾಟಕ ಮತ್ತು ಗಡಿಯಲ್ಲಿದೆ.

ಪೂರ್ವ : ಸೈಟ್ ಸಂಖ್ಯೆ 728, ಎಂಐಜಿ - I
ಪಶ್ಚಿಮ : ರಸ್ತೆ
ಉತ್ತರ : ರಸ್ತೆ
ದಕ್ಷಿಣ : ಸೈಟ್ ಸಂಖ್ಯೆ 439, ಎಂಐಜಿ - II

ಅಧಿಕಾರವಿರುವ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
(ಎಆರ್‌ಸಿಐಎಲ್–ಸಿಪಿಎಸ್– IV, ಟ್ರಸ್ಟ್‌ನ ಟ್ರಸ್ಟಿ)

ದಿನಾಂಕ: 15.07.2026
ಸ್ಥಳ : ಹಸನ್

ಪೊಲೀಸರ ಭರ್ಜರಿ ಬೇಟೆ: 4.91 ಕೋಟಿ ರು. ಮೌಲ್ಯದ ಚಿನ್ನಾಭರಣ, ನಗದು ಜಪ್ತಿ: ಸೀಮಂತ್ ಕುಮಾರ್ ಸಿಂಗ್

70 ಅಪರಾಧ ಪ್ರಕರಣ: 94 ಖದೀಮರ ಬಂಧನ

ಬೆಂಗಳೂರು: ನಗರದ ಉತ್ತರ ವಿಭಾಗದ ಪೊಲೀಸರು ಕಳ್ಳರು, ದರೋಡೆಕೋರರು ಹಾಗೂ ಸುಲಿಗೆಕೋರರ ವಿರುದ್ಧ ಬೃಹತ್ ಕಾರ್ಯಾಚರಣೆ ನಡೆಸಿ ಭರ್ಜರಿ ಯಶಸ್ಸು ಸಾಧಿಸಿದ್ದಾರೆ.

ಕಳೆದ ಆರು ತಿಂಗಳ ಅವಧಿಯಲ್ಲಿ ನಡೆದಿದ್ದ ಮನೆಗಳ್ಳತನ, ದರೋಡೆ, ಸರಗಳ್ಳತನ, ವಾಹನ ಕಳವು ಸೇರಿದಂತೆ ಒಟ್ಟು 70 ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಿರುವ ಪೊಲೀಸರು, ಬರೋಬ್ಬರಿ 94 ಮಂದಿ ಆರೋಪಿಗಳನ್ನು ಹೆಡೆಮುರಿ ಕಟ್ಟಿದ್ದಾರೆ. ಬಂಧಿತ ಆರೋಪಿಗಳಿಂದ ವಶಪಡಿಸಿಕೊಳ್ಳಲಾದ ಒಟ್ಟು 4,91,94,517 ರು. ಮೌಲ್ಯದ ಚಿನ್ನಾಭರಣ, ನಗದು ಹಾಗೂ ವಾಹನಗಳನ್ನು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಮೂಲ ಮಾಲೀಕರಿಗೆ (ವಾರಸುದಾರರಿಗೆ) ಹಸ್ತಾಂತರಿಸಲಿದ್ದಾರೆ.

ಉತ್ತರ ವಿಭಾಗದ ಆರ್.ಟಿ.ನಗರ, ಮಲ್ಲೇಶ್ವರಂ, ಸಂಜಯ್ ನಗರ, ಹೆಬ್ಬಾಳ, ಯಶವಂತಪುರ, ಸುಬ್ರಮಣ್ಯ ನಗರ, ಮಹಾಲಕ್ಷ್ಮೀ ಲೇಔಟ್ ಹಾಗೂ ನಂದಿನಿ ಲೇಔಟ್ ಸೇರಿದಂತೆ ವಿವಿಧ ಠಾಣಾ ವ್ಯಾಪ್ತಿಯಲ್ಲಿ ದಾಳಿ ನಡೆಸಿ ಜಪ್ತಿ ಮಾಡಲಾಗಿದೆ. ಇದರೊಂದಿಗೆ ಶ್ರೀರಾಮಪುರ, ರಾಜಾಜಿನಗರ, ಸುಬ್ರಮಣ್ಯನಗರ, ಮಹಾಲಕ್ಷ್ಮೀ ಲೇಔಟ್, ಆರ್.ಎಂ.ಸಿ ಯಾರ್ಡ್ ಹಾಗೂ ಜಾಲಹಳ್ಳಿ ಮತ್ತು ಜೆ.ಪಿ ನಗರ ಠಾಣೆಯ ಪೊಲೀಸರು ಶ್ಲಾಘನೀಯ ಕಾರ್ಯಾಚರಣೆ ನಡೆಸಿದ್ದಾರೆ. ಕಳೆದ ಆರು ತಿಂಗಳಲ್ಲಿ ಕಷ್ಟಪಟ್ಟು ಸಂಪಾದಿಸಿದ ಹಣ, ಒಡವೆ ಕಳೆದುಕೊಂಡು ಕಂಗಾಲಾಗಿದ್ದ ಸಾರ್ವಜನಿಕರು ತಮ್ಮ ವಸ್ತುಗಳನ್ನು ಮರಳಿ ಪಡೆಯುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಲ್ಲೇಶ್ವರಂ ಪೊಲೀಸ್ ಠಾಣೆ: ಬರೋಬ್ಬರಿ 14 ಪ್ರಕರಣಗಳನ್ನು ಭೇದಿಸಿರುವ ಮಲ್ಲೇಶ್ವರಂ ಪೊಲೀಸರು 12 ಆರೋಪಿಗಳನ್ನು ಬಂಧಿಸಿದ್ದಾರೆ. ಇವರಿಂದ 1.84 ಕೋಟಿ ರು. ಮೌಲ್ಯದ 1 ಕೆ.ಜಿಗೂ ಅಧಿಕ ಚಿನ್ನ, 6 ಬೈಕ್ ಹಾಗೂ 17 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

ಹೆಬ್ಬಾಳ ಪೊಲೀಸ್ ಠಾಣೆ:6 ಪ್ರಕರಣಗಳಲ್ಲಿ 5 ಆರೋಪಿಗಳನ್ನು ಬಂಧಿಸಿ, 82.01 ಲಕ್ಷ ರು. ಮೌಲ್ಯದ 507 ಗ್ರಾಂ ಚಿನ್ನಾಭರಣ ಹಾಗೂ 80 ಸಾವಿರ ರು. ನಗದು ವಶಪಡಿಸಿಕೊಳ್ಳಲಾಗಿದೆ.

ನಂದಿನಿ ಲೇಔಟ್ ಠಾಣೆ: 7 ಪ್ರಕರಣಗಳಲ್ಲಿ 3 ಆರೋಪಿಗಳನ್ನು ಬಂಧಿಸಲಾಗಿದ್ದು, ಇವರಿಂದ ಬರೋಬ್ಬರಿ 44.780 ಕೆ.ಜಿ. ಶ್ರೀಗಂಧದ ಮರ, ಚಿನ್ನ ಹಾಗೂ ವಾಹನಗಳು ಸೇರಿ ಒಟ್ಟು 48.50 ಲಕ್ಷ ರು. ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಯಶವಂತಪುರ ಪೊಲೀಸ್ ಠಾಣೆ: 9 ಪ್ರಕರಣಗಳಲ್ಲಿ 6 ಆರೋಪಿಗಳನ್ನು ಬಂಧಿಸಿ 36.37 ಲಕ್ಷ ರು. ಮೌಲ್ಯದ ಚಿನ್ನ, 17 ಮೊಬೈಲ್ ಹಾಗೂ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ ಡಿಜಿಟಲ್ ಉಪಕರಣವನ್ನು ಜಪ್ತಿ ಮಾಡಲಾಗಿದೆ.

ಆರ್.ಟಿ. ನಗರ ಮತ್ತು ಸಂಜಯನಗರ:ಆರ್.ಟಿ. ನಗರದಲ್ಲಿ 9 ಪ್ರಕರಣಗಳಲ್ಲಿ 14 ಆರೋಪಿಗಳನ್ನು ಬಂಧಿಸಿ 30.18 ಲಕ್ಷ ರು. ಮೌಲ್ಯದ ಮಾಲು ರಿಕವರಿ ಮಾಡಲಾಗಿದೆ. ಸಂಜಯನಗರದಲ್ಲಿ ಅತ್ಯಧಿಕ ಅಂದರೆ 19 ಪ್ರಕರಣಗಳನ್ನು ಭೇದಿಸಿ 7 ಆರೋಪಿಗಳನ್ನು ಬಂಧಿಸಿ 27.44 ಲಕ್ಷ ರು. ಮೌಲ್ಯದ ಸೊತ್ತು ವಶಪಡಿಸಿಕೊಳ್ಳಲಾಗಿದೆ.

2 ವರ್ಷದ ಹೆಣ್ಣು ಮಗು ಶಂಕಾಸ್ಪದ ಸಾವು

ಬೆಂಗಳೂರು: 2 ವರ್ಷದ ಹೆಣ್ಣು ಮಗುವೊಂದು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಬೆಂಗಳೂರಿನಲ್ಲಿ ವರದಿಯಾಗಿದ್ದು, ಪೋಷಕರೇ ಮಗುವಿನ ಮೇಲೆ ದೌರ್ಜನ್ಯ ನಡೆಸಿರುವ ಆರೋಪ ಕೇಳಿಬಂದಿದೆ.

ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ಇಂದಿರಾ ಸ್ಟ್ರೀಟ್‌ನಲ್ಲಿ ಘಟನೆ ನಡೆದಿದೆ. ಮಗುವಿನ ಪೋಷಕರ ಕುಟುಂಬದ ಸ್ನೇಹಿತೆ ಸಮೃದ್ಧಿ ಎಂಬವರು ನೀಡಿದ ದೂರಿನ ಮೇರೆಗೆ ಬಾಣಸವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಗುವಿನ ಪೋಷಕರಾದ ಅಂಥೋಣಿ ಹಾಗೂ ರೋಸ್ಲಿನ್ ಕಳೆದ ಕೆಲವು ವರ್ಷಗಳಿಂದ ಬಾಣಸವಾಡಿಯ ಇಂದಿರಾ ಸ್ಟ್ರೀಟ್‌ನಲ್ಲಿರುವ ಮನೆಯಲ್ಲಿ ಲಿವ್-ಇನ್ ರಿಲೇಷನ್‌ಶಿಪ್‌ನಲ್ಲಿ ವಾಸವಿದ್ದರು. ಇವರಿಗೆ ಈ ಹೆಣ್ಣು ಮಗು ಜನಿಸಿತ್ತು.

ಬುಧವಾರ ಮನೆಯಲ್ಲಿದ್ದಾಗ ಮಗುವಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡಿದೆ. ತಕ್ಷಣ ಮಗುವನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೂ ಆಸ್ಪತ್ರೆಗೆ ತಲುಪುವಷ್ಟರಲ್ಲೇ ಮಗು ಮೃತಪಟ್ಟಿದೆ ಎಂದು ವೈದ್ಯರು ಘೋಷಿಸಿದ್ದಾಗಿ ಪೋಷಕರು ಹೇಳುತ್ತಿರುವುದು ಅನುಮಾನಕ್ಕೆ ಕಾರಣವಾಗಿದೆ.

ದೂರುದಾರೆ ಹಾಗೂ ಪತಿಯ ವಿರುದ್ಧ ರೋಸ್ಲಿನ್ ಪ್ರತ್ಯಾರೋಪ

ಮಗುವಿಗೆ ಉಸಿರಾಟದ ತೊಂದರೆಯಾದಾಗ ನನ್ನ ಪತಿಯ ಸ್ನೇಹಿತೆ (ಸಮೃದ್ಧಿ) ಸಹಾಯ ಮಾಡಲು ಬಂದಿದ್ದಳು. ಮಗುವಿಗೆ ಐದು ವರ್ಷ ತುಂಬುವ ಮುನ್ನ ವೆಂಟಿಲೇಷನ್ ಮಾಸ್ಕ್ ನೀಡಬಾರದು ಎಂದು ಹೇಳಿ, ಬಿಸಿ ನೀರಿಗೆ ವಿಕ್ಸ್ ಬೆರೆಸಿ ಆವಿ ಹಿಡಿಸಲು ಮುಂದಾದಳು. ಮಗು ಭಯಗೊಂಡು ತನಗೆ ಆವಿ ಬೇಡವೆಂದು ಚೀರಿದಾಗ ಆಕೆ ಮಗುವನ್ನು ತಳ್ಳಿ ಹಲ್ಲೆ ನಡೆಸಿದಳು. ಮಗುವಿಗೆ ಆರೋಗ್ಯ ಸರಿಯಿಲ್ಲದಿದ್ದರೂ ಇತ್ತ ನನ್ನ ಪತಿ ಆಸ್ಪತ್ರೆಗೆ ಕರೆದೊಯ್ಯಲು ನಿರಾಕರಿಸಿದ.

ಹಣ ಇಲ್ಲವೆಂದು ನೆಪ ಹೇಳಿ ಅಲ್ಲಿಂದ ಹೊರಟು ಹೋದ ಹಾಗೂ ಮಗುವಿನ ಬಗ್ಗೆ ಯಾವುದೇ ಕಾಳಜಿ ವಹಿಸಲಿಲ್ಲ. ಮಾದಕ ವ್ಯಸನದ ಗೀಳು ಹೊಂದಿದ್ದ ಸಮೃದ್ಧಿಯ ವರ್ತನೆಯಿಂದ ಹೆದರಿದ ಮಗುವಿಗೆ ಆಘಾತವಾಯಿತು.

ಪತಿ ಅಂಥೋನಿ ಮತ್ತು ಆತನ ಗೆಳತಿಯೇ ಮಗುವಿನ ಸಾವಿಗೆ ಕಾರಣ ಎಂದು ಕಣ್ಣೀರಿಡುತ್ತಾ ಆರೋಪಿಸಿದ್ದಾರೆ. ಸಮೃದ್ಧಿ ನೀಡಿರುವ ದೂರಿನನ್ವಯ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಸೆಕ್ಷನ್ 194(4) ಅಡಿಯಲ್ಲಿ ಬಾಣಸವಾಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಗುವಿನ ಮರಣೋತ್ತರ ಪರೀಕ್ಷಾ ವರದಿಗಾಗಿ ಕಾಯುತ್ತಿದ್ದು, ನಂತರವೇ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

wework
INDIA

WeWork India Management Limited
(formerly known as WeWork India Management Private Limited)
CIN: L74999KA2016PLC093227

EXTRACT OF UNAUDITED STANDALONE AND CONSOLIDATED FINANCIAL RESULTS FOR THE QUARTER ENDED JUNE 30, 2026

(Rs. in Million, unless specified)

Sl. No	Particulars	Standalone				Consolidated			
		Quarter ended 30/06/2026 (Unaudited)	Quarter ended 31/03/2026 (Audited)	Quarter ended 30/06/2025 (Audited)	Year ended 31/03/2026 (Audited)	Quarter ended 30/06/2026 (Unaudited)	Quarter ended 31/03/2026 (Audited)	Quarter ended 30/06/2025 (Audited)	Year ended 31/03/2026 (Audited)
1	Total Income from Operations	6,802.02	6,928.46	5,339.54	24,317.63	6,838.32	6,960.63	5,353.1	24,401.8
2	Net profit/(loss) for the period (before tax, exceptional and/or extraordinary items)	(45.82)	422.01	(146.08)	543.38	(40.37)	430.47	(137.53)	550.85
3	Net profit/(loss) for the period before tax (after exceptional and/or extraordinary items)	(45.82)	422.01	(146.08)	500.44	(39.43)	440.06	(140.98)	528.97
4	Net profit/(loss) for the period after tax (after exceptional and/or extraordinary items)	(45.82)	643.72	(146.08)	722.15	(40.61)	658.70	(141.47)	749.18
5	Total Comprehensive Income for the period [Comprising profit/(loss) for the period (after tax) and other comprehensive income (after tax)]	(52.51)	644.04	(149.31)	716.34	(47.52)	660.45	(144.93)	744.11
6	Equity Share Capital (Face value of Rs. 10 each)	1,385.90	1,353.78	1,340.23	1,353.78	1,385.90	1,353.78	1,340.23	1,353.78
7	Reserves (excluding Revaluation Reserve) as per the Audited Balance Sheet of the previous year	-	1,698.55	639.09	1,698.55	-	1,625.91	549.46	1,625.91
8	Earnings Per Share (of Rs. 10/- each) 1. Basic (amount in Rs.)	(0.33)	4.80	(1.09)	5.39	(0.31)	4.88	(1.05)	5.55
	2. Diluted (amount in Rs.)	(0.33)	4.67	(1.09)	5.23	(0.31)	4.76	(1.05)	5.40

Notes:

a) The above is an extract of the Unaudited Financial Results for the quarter ended June 30, 2026, filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the aforesaid Financial Results are available on the websites of the Stock Exchanges (www.nseindia.com and www.bseindia.com) and on the Company's website at www.wework.co.in. The same can also be accessed by scanning the Quick Response (QR) code.

b) The above Unaudited Standalone and Consolidated Financial Results were reviewed by the Audit Committee and approved by the Board of Directors at their meetings held on July 16, 2026. The said Financial Results are prepared in accordance with the Indian Accounting Standard 34, (Ind AS 34) Interim Financial Reporting prescribed under Section 133 of the companies Act, 2013.

For more information
Please scan:

For and on behalf of the Board of Directors

Karan Virwani
Managing Director & CEO
DIN: 03071954

Place: Bengaluru
Date: July 16, 2026

Registered Office: 6th Floor, Prestige Central, 36 Infantry Road, Shivaji Nagar, Bengaluru, Karnataka, India – 560001
Email ID: cswwi@wework.co.in | **Phone:** +91 88 8456 4500 | **Website:** www.wework.co.in

ದರ್ಶನ್‌ಗೆ ಹಿನ್ನಡೆ: ಬಾಸ್ ಚಿತ್ರ ಪ್ರದರ್ಶನಕ್ಕೆ ಕೋರ್ಟ್ ಸಮ್ಮತಿ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣವನ್ನು ಆಧರಿಸಿಕೊಂಡು ನಿರ್ಮಿಸಲಾಗಿದೆ ಎನ್ನಲಾದ ಬಾಸ್ ಸಿನಿಮಾ ಬಿಡುಗಡೆಗೆ ನೀಡಲಾಗಿದ್ದ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಆದೇಶದಿಂದಾಗಿ ಬಾಸ್ ಚಿತ್ರದ ಪ್ರದರ್ಶನಕ್ಕಿದ್ದ ಅಡ್ಡಿ ತೆರವಾಗಿದ್ದು, ಚಿತ್ರ ಬಿಡುಗಡೆಗೆ ಹಾದಿ ಸುಗಮವಾಗಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ದರ್ಶನ್, ಪತ್ನಿ ವಿಜಯಲಕ್ಷ್ಮಿಗೆ ಹಿನ್ನಡೆಯಾಗಿದೆ. ಚಿತ್ರ ಬಿಡುಗಡೆಗೆ ಅವಕಾಶ ನೀಡಿದ್ದ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ದರ್ಶನ್ ಪತ್ನಿ ವಿಜಯಲಕ್ಷ್ಮಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿತು. ಚಿತ್ರ ಬಿಡುಗಡೆಗಿದ್ದ ತಡೆಯಾಜ್ಞೆ ತೆರವುಗೊಳಿಸಿರುವ ವಿಚಾರಣಾ ನ್ಯಾಯಾಲಯದ ಆದೇಶದಲ್ಲಿ ಯಾವುದೇ ದೋಷವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.ಇದೇ ವೇಳೆ, ಚಿತ್ರದ ನಿರ್ಮಾಣ ಸಂಸ್ಥೆ ಸಿರಿ ಪ್ರೊಡಕ್ಷನ್ಸ್‌ಗೆ ನ್ಯಾಯಾಲಯ ಡಿಸ್ಕ್ಲೇಮರ್ ಪ್ರದರ್ಶಿಸುವಂತೆ ಕಟ್ಟುನಿಟ್ಟಿನ ಎಚ್ಚರಿಕೆ ಕೊಟ್ಟಿದೆ. ಚಿತ್ರದ ಆರಂಭದಲ್ಲಿ 30 ಸೆಕೆಂಡುಗಳ ಕಾಲ ಡಿಸ್ಕ್ಲೇಮರ್ ಪ್ರದರ್ಶಿಸಲಾಗುವುದು ಮತ್ತು ಚಿತ್ರದಲ್ಲಿ ಅಪೀಲುದಾರರ ವೈಯಕ್ತಿಕ ಜೀವನ, ಕುಟುಂಬ ಅಥವಾ ನಟನಾ ಜೀವನಕ್ಕೆ ಸಂಬಂಧಿಸಿದ ಯಾವುದೇ ನೈಜ ಘಟನೆಗಳನ್ನು ಬಳಸಿಕೊಂಡಿಲ್ಲ ಎಂಬುದಾಗಿ ನ್ಯಾಯಾಲಯಕ್ಕೆ ಲಿಖಿತ ಹೇಳಿಕೆ ನೀಡಿದ್ದೀರಿ. ಇದನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಪೀಠ ಸೂಚಿಸಿದೆ.

ಪ್ರಕರಣದ ಹಿನ್ನೆಲೆ ಏನು?

ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ಎದುರಿಸುತ್ತಿರುವ ನಟ ದರ್ಶನ್, ಬಾಸ್ ಚಿತ್ರ ಈ ನೈಜ ಘಟನೆಯಿಂದ ಪ್ರೇರಿತವಾಗಿದೆ ಮತ್ತು ಇದು ತಮ್ಮ ಮೇಲಿನ ಕಾನೂನು ವಿಚಾರಣೆಯ ಮೇಲೆ ನಕಾರಾತ್ಮಕ ಪ್ರಭಾವ ಬೀರಬಹುದು ಎಂದು ತಿಳಿಸಿ, ಸಿನಿಮಾ ಬಿಡುಗಡೆಗೆ ತಡೆ ನೀಡಬೇಕು ಎಂದು ಕೋರಿ ಕಳೆದ ಮಾರ್ಚ್‌ನಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಮಧ್ಯಂತರ ತಡೆ ನೀಡಲು ನಿರಾಕರಣೆ: ಆದೇಶ ಹೊರ ಬೀಳುತ್ತಿದ್ದಂತೆ, ಈ ಆದೇಶ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಲು ಕಾಲಾವಕಾಶ ಬೇಕಾಗಿರುವುದರಿಂದ ಚಿತ್ರದ ಬಿಡುಗಡೆ ಕನಿಷ್ಠ ಒಂದು ವಾರ ತಡೆಯಬೇಕು ಎಂದು ದರ್ಶನ್ ಪರ ವಕೀಲರು ಮನವಿ ಮಾಡಿದರು. ಇದನ್ನು ತಿರಸ್ಕರಿಸಿದ ನ್ಯಾಯಪೀಠ, ವಿಚಾರಣಾ ನ್ಯಾಯಾಲಯದ ತಡೆಯಾಜ್ಞೆ ತೆರವು ಆದೇಶದ ವಿರುದ್ಧದ ನಿಮ್ಮ ಅರ್ಜಿ ವಜಾಗೊಳಿಸುತ್ತಿರುವುದರ ಮುಖ್ಯ ಉದ್ದೇಶವೇ ಸಿನಿಮಾ ಬಿಡುಗಡೆಗೆ ಅವಕಾಶ ನೀಡುವುದಾಗಿದೆ ಎಂದು ಮೌಖಿಕವಾಗಿ ತಿಳಿಸಿದೆ.

ಇಂಡಿಗೋ ವಿಮಾನಕ್ಕೆ ಬಾಂಬ್ ಬೆದರಿಕೆ: ಪ್ರಯಾಣಿಕರಲ್ಲಿ ಆತಂಕ

ಬೆಂಗಳೂರು : ಟೇಕಾಫ್‌ಗೆ ಹೊರಟಿದ್ದ ಇಂಡಿಗೋ ವಿಮಾನದಲ್ಲಿ ಬಾಂಬ್ ಬೆದರಿಕೆ ಸಂದೇಶ ಕಂಡು ಬಂದ ಹಿನ್ನೆಲೆಯಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾದ ಘಟನೆ ನಡೆದಿದೆ. ಗುರುವಾರ ರಾತ್ರಿ 8 ಗಂಟೆಗೆ ಬೆಂಗಳೂರಿನಿಂದ ಅಹಮದಾಬಾದ್‌ಗೆ ತೆರಳುತ್ತಿದ್ದ 6ಇ-6423 ಇಂಡಿಗೋ ವಿಮಾನದಲ್ಲಿ ಬಾಂಬ್ ಬೆದರಿಕೆ ಪತ್ರ ಕಂಡು ಬಂದಿದೆ. 'Dont go Bomb hi please' ಅಂತ ಪೇಪರ್‌ನಲ್ಲಿ ಬರೆದು ವಿಮಾನದ ಕ್ರೀವ್ ಲ್ಯಾವೆಟರಿನಲ್ಲಿ ಇಟ್ಟಿರುವುದು ಪತ್ತೆಯಾಗಿದೆ. ಬಾಂಬ್ ಬೆದರಿಕೆಯ ಸಂದೇಶ ಕಂಡು ಬಂದ ಹಿನ್ನೆಲೆ ತಕ್ಷಣವೇ ಪ್ರಯಾಣಿಕರನ್ನ ಕೆಳಗಡೆ ಇಳಿಸಿದ ಭದ್ರತಾ ಸಿಬ್ಬಂದಿ ವಿಮಾನವನ್ನ ತಪಾಸಣೆ ನಡೆಸಿದ್ದಾರೆ. ಈ ವೇಳೆ, ಯಾವುದೇ ಬಾಂಬ್ ಪತ್ತೆಯಾಗ ಹಿನ್ನೆಲೆ ಇದೊಂದು ಹುಸಿ ಬಾಂಬ್ ಸಂದೇಶ ಎಂದು ದೃಢಪಟ್ಟಿದೆ. ಬಾಂಬ್ ಬೆದರಿಕೆ ಪತ್ರ ಬರೆದಿಟ್ಟವನ ವಿರುದ್ಧ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಇಂಡಿಗೋ ಸಂಸ್ಥೆಯಿಂದ ದೂರು ದಾಖಲಾಗಿದೆ. ಈ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದಾರೆ.